

ನೆಲ್ಲುಕುಂಟೆ ವೆಂಕಟೇಶ್

# ಪ್ರಕಾಶಿಸಿ ಮರೆಯಾದ ಹೊಸ ತಲೆಮಾರಿನ ಗಟ್ಟಿ ದನಿ

ಪ್ರಕಾಶ್ ಬಡವನಹಳ್ಳಿ ಹೊಸ ತಲೆಮಾರಿನ ಪ್ರಖರ ಚಿಂತಕರಾಗಿದ್ದರು. ಕನ್ನಡದಲ್ಲಿ ಮಹತ್ವದ ವಿಮರ್ಶಕರಾಗಿ ಬೆಳೆಯುವ ಭರವಸೆ ಹುಟ್ಟಿಸಿದ್ದ ಈ ಪ್ರತಿಭಾವಂತನ ಹೃದಯ ಎರಡು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ಸ್ತಬ್ಧವಾಯಿತು. ಪ್ರಕಾಶ್ ಅವರ ಸಹಪಾಠಿ, ಸಂಗಾತಿ ಸುಕನ್ಯಾ ಮತ್ತು ಗೆಳೆಯರ ಪ್ರಯತ್ನದ ಫಲವಾಗಿ 'ನುಡಿ ಸಂಕಥನ' ಎಂಬ ಕೃತಿ ರೂಪುಗೊಂಡಿದೆ.

ಈ ಕೃತಿಯಲ್ಲಿ ನಾಲ್ಕು ಭಾಗಗಳಿವೆ. ಮೊದಲ ಭಾಗದಲ್ಲಿ ಪ್ರಕಾಶ್ ಕುರಿತ ಬರಹಗಳಿವೆ. ಉಳಿದ ಭಾಗಗಳಲ್ಲಿ ಪ್ರಕಾಶ್ ಅವರ ಲೇಖನಗಳು, ಸಂದರ್ಶನಗಳು, ನುಡಿಚಿತ್ರಗಳು ಮತ್ತು ಭಾಷಣಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ. 408 ಪುಟಗಳ ಈ ಕೃತಿಯಲ್ಲಿ ಲೇಖನ, ಮುನ್ನುಡಿ, ಬೆನ್ನುಡಿ, ಸಂದರ್ಶನ, ನುಡಿಚಿತ್ರ ಹಾಗೂ ಭಾಷಣಗಳಿವೆ. ಉಳಿದವು ಅವರು ಆಗಾಗ ಮಾಡಿಕೊಂಡ ಟಿಪ್ಪಣಿಗಳಾಗಿವೆ. ಕೆಲವು ಕಡೆ ಪ್ರಕಾಶ್ ಮಾಡಿದ ಭಾಷಣದ ಸ್ಥಳ ಇತ್ಯಾದಿ ವಿವರಗಳನ್ನು ಪುಸ್ತಕದಲ್ಲಿ ಕೊಡಲಾಗಿದೆ. ಹಾಗೆಯೇ ಇನ್ನುಳಿದವುಗಳ ಸ್ಥಳ, ಅನುಕ್ರಮಣಿಕೆ ಕೊಟ್ಟಿದ್ದರೆ ಓದುಗರಿಗೆ ಉಪಯುಕ್ತವಾಗುತ್ತಿತ್ತು.

ತೀವ್ರ ಒಳನೋಟಗಳಿರುವ ಯುವ ವಿದ್ವಾಂಸರಾಗಿದ್ದ ಪ್ರಕಾಶ್ ತಾನು ಬದುಕಿರುವ ಯುಗಧರ್ಮದ ಬೇಡಿಕೆಗಳಿಗೆ ಅನುಗುಣವಾಗಿ ತಮ್ಮ ಬರಹಗಳನ್ನು ಮಾಡಿದ್ದಾರೆ. ಅವರ ಈ ಕೃತಿ ಕನ್ನಡ ಸಾಹಿತ್ಯದ ಅನೇಕ ವಾಗ್ವಾದಗಳನ್ನು ದಾಖಲಿಸಲು ಶ್ರಮಿಸಿದೆ ಮತ್ತು ಪ್ರಯತ್ನಿಸಿದೆ. ತನ್ನ ಓರಗೆಯ ಬರಹಗಾರರ ಅನೇಕ ಕೃತಿಗಳ ಕುರಿತು ಪರಿಚಯಾತ್ಮಕ ಬರಹಗಳನ್ನು ಬರೆದು ಅವರನ್ನು ಬೆಳಕಿಗೆ ತರುವ ಕೆಲಸವನ್ನೂ ಅವರು ಮಾಡಿದ್ದಾರೆ. ಅದರಲ್ಲೂ ದಲಿತ–ದಮನಿತ, ಮಹಿಳೆಯರ ಕೃತಿಗಳ ಮೇಲಿನ ಬರಹಗಳು ಆದ್ಯತೆಯೆಂಬಂತೆ ಬರೆಸಿಕೊಂಡಿವೆ. ಪ್ರಕಾಶ್ ಅವರ ಬಹುತೇಕ ಬರಹಗಳಲ್ಲಿ ಶರಣ ಸಾಹಿತ್ಯದ ನೆರಳು ಕಾಣುತ್ತದೆ. ಆ ಕುರಿತ ಐದು ಬರಹಗಳು ಈ ಕೃತಿಯಲ್ಲಿವೆ. ರಾಷ್ಟ್ರೀಯತೆ ಕುರಿತು ಒಂದೆರಡು ಬರಹಗಳಿವೆ.

ವಿಮರ್ಶಕ ಡಿ.ಆರ್. ನಾಗರಾಜ್ ಅವರ ಚಿಂತನೆಗಳ ಪ್ರಭಾವಕ್ಕೆ ಪ್ರಕಾಶ್ ಅವರು ಒಳಗಾಗಿರುವುದು ಅವರ ಹಲವು ಬರಹ ಮತ್ತು ಭಾಷಣಗಳಲ್ಲಿ ಕಾಣಿಸುತ್ತದೆ. ಅನೇಕ ಕಡೆ ಡಿ.ಆರ್. ಚಿಂತನೆಯ ಸಮ್ಮೋಹಿನಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವುದೂ ಕಾಣಿಸುತ್ತದೆ. ಡಿ.ಆರ್. ಮುಟ್ಟಿದ ಕ್ಷೇತ್ರಗಳನ್ನು ತಾನೂ ಮುಟ್ಟಬೇಕೆಂಬ ಹಂಬಲವನ್ನಿಟ್ಟುಕೊಂಡೇ ತಮ್ಮ ಬಹುಪಾಲು ಲೇಖನಗಳು ಮತ್ತು ಭಾಷಣಗಳನ್ನು ಅವರು ರೂಪಿಸಿದ್ದಾರೆ.